## ನಿಮ್ಮೊಡನೆ

# ಪ್ರಾಣಿಗಳ ಬಗ್ಗೆ ಸಹಾನುಭೂತಿ ಅಗತ್ಯ

ಚಿತ್ರದುರ್ಗ ಸಮೀಪದ ಉಪನಾಯಕನಹಳ್ಳಿಯಲ್ಲಿ ಕರಡಿಯೊಂದು ನಾಗರಿಕರ ಆಕ್ರೋಶಕ್ಕೆ ಬಲಿಯಾಗಿದೆ. ಕಳೆದ ವಾರ ನಡೆದಿರುವ ಈ ದುರ್ಘಟನೆ ಕಾಡುಪ್ರಾಣಿಗಳ ಕುರಿತ ನಾಗರಿಕ ಜಗತ್ತಿನ ಅವಜ್ಞೆ ಮತ್ತು ಕ್ರೌರ್ಯವನ್ನು ಸೂಚಿಸುವಂತಿದೆ ಹಾಗೂ ಅರಣ್ಯ ಇಲಾಖೆಯ ಬೇಜವಾಬ್ದಾರಿಗೂ ಉದಾಹರಣೆಯಾಗಿದೆ. ಕರಡಿಯ ದಾಳಿಯಿಂದಾಗಿ ರೈತನೊಬ್ಬ ತೀವ್ರವಾಗಿ ಗಾಯಗೊಂಡಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಸುದ್ದಿ ತಿಳಿದರೂ ಅರಣ್ಯ ಇಲಾಖೆ ಸಕಾಲಕ್ಕೆ ಸ್ಪಂದಿಸದ ಕಾರಣ ತಾವೇ ಪರಿಹಾರ ಕಂಡುಕೊಳ್ಳಲು ಮುಂದಾದ ಜನ, ಕೈಗೆ ಸಿಕ್ಕ ಕಲ್ಲು, ಬಡಿಗೆಗಳಿಂದ ಕರಡಿಯ ಮೇಲೆ ದಾಳಿ ಮಾಡಿದ್ದಾರೆ. ಈ ಆಕ್ರೋಶವನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ. ಆದರೆ, ಅರಣ್ಯ ಇಲಾಖೆಯ ನಿರ್ಲಕ್ಷ್ಯಕ್ಕೆ ಕ್ಷಮೆಯೇ ಇಲ್ಲ. ‘ಸಿಬ್ಬಂದಿ ಕೊರತೆ’ ಎನ್ನುವ ಇಲಾಖೆಯ ನೆಪ ಕಾಡುಪ್ರಾಣಿಗಳ ಸಾವಿಗೆ ಕಾರಣವಾಗಬಾರದು.

ಕಳೆದ ಮೂರು ತಿಂಗಳ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಊರಿಗೆ ಬಂದ ಕಾಡುಪ್ರಾಣಿಗಳನ್ನು ಹೊಡೆದು ಕೊಂದಿರುವ ಮೂರನೇ ಪ್ರಸಂಗ ಇದು. 2015ರ ನ. 18ರಂದು ಹೊಸದುರ್ಗ ತಾಲ್ಲೂಕಿನ ಕಣಿಗೆಕಲ್‌ನಲ್ಲಿ ಗ್ರಾಮಸ್ಥರ ಸಿಟ್ಟಿಗೆ ಕರಡಿಯೊಂದು ಬಲಿಯಾಗಿತ್ತು. ಕಳೆದ ಡಿ. 29ರಂದು ಚಳ್ಳಕೆರೆ ತಾಲ್ಲೂಕಿನ ಗಿರಿಯಮ್ಮನಹಳ್ಳಿ ಗ್ರಾಮದ ಸಮೀಪ ಚಿರತೆಯೊಂದನ್ನು ಹೊಡೆದು ಕೊಲ್ಲಲಾಗಿತ್ತು. ಈಗ ಉಪನಾಯಕನಹಳ್ಳಿ ಸರದಿ.

ಮನುಷ್ಯ ಮತ್ತು ಪ್ರಾಣಿಗಳ ನಡುವಣ ಸಂಘರ್ಷ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಇದು ಕರಡಿ ಅಥವಾ ಚಿರತೆಗಳಿಗೆ ಸಂಬಂಧಿಸಿದ ಸಮಸ್ಯೆಯಲ್ಲ. ಗ್ರಾಮಸ್ಥರು ತಮ್ಮ ಹೊಲಗಳಿಗೆ ಹಾಕುವ ವಿದ್ಯುತ್ ಬೇಲಿಯಿಂದ ಆನೆಗಳು ಸಾಯುತ್ತಿರುವುದನ್ನು ಗಮನಿಸಬೇಕು. ಬಂಡೀಪುರ ರಾಷ್ಟ್ರೀಯ ಉದ್ಯಾನ ಪರಿಸರದಲ್ಲಿ 2014ರಲ್ಲಿ 15 ಆನೆಗಳು ವಿದ್ಯುತ್ ಬೇಲಿಗೆ ಸಿಕ್ಕು ಸಾವನ್ನಪ್ಪಿದ್ದವು. ಕಳೆದ ವರ್ಷ ಕೂಡ ಆನೆಗಳ ದಾರುಣ ಸಾವಿನ ಹಲವು ಪ್ರಕರಣಗಳು ವರದಿಯಾಗಿವೆ. ಪ್ರತಿ ಸಲ ಆನೆ ಸತ್ತಾಗಲೂ ಅದನ್ನು ಗೌರವಪೂರ್ವಕವಾಗಿ ಅಂತ್ಯಸಂಸ್ಕಾರ ಮಾಡುವ ಸಮಾಜ, ಅಷ್ಟಕ್ಕೆ ತನ್ನ ಕರ್ತವ್ಯ ಮುಗಿಯಿತು ಎಂದು ಸುಮ್ಮನಾಗುತ್ತದೆ. ಕಾಡಿನಲ್ಲಿ ಇರಬೇಕಾದ ಪ್ರಾಣಿಗಳು ಊರಿಗೆ ನುಗ್ಗುತ್ತಿರುವುದೇಕೆ? ಈ ಪ್ರಕ್ರಿಯೆಯಲ್ಲಿ ನಮ್ಮ ಪಾಲೆಷ್ಟು? ಎನ್ನುವ ಬಗ್ಗೆ ಯೋಚಿಸುವವರು ಕಡಿಮೆ. ಮನುಷ್ಯರ ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನವ ಹಕ್ಕುಗಳ ಬಗ್ಗೆ ಮಾತನಾಡುವವರು ಕಾಡುಪ್ರಾಣಿಗಳ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಾರೆ.

ಮನುಷ್ಯರ ಹಸ್ತಕ್ಷೇಪದಿಂದಲೇ ಕಾಡಿನ ಪ್ರಾಣಿಗಳು ಊರಿನತ್ತ ಬರುತ್ತಿವೆ ಎನ್ನುವುದು ಸರಳ ಸತ್ಯ. ಕೃಷಿ ಭೂಮಿಯನ್ನು ಹೆಚ್ಚಿಸಿಕೊಳ್ಳುವ ಉತ್ಸಾಹದಲ್ಲಿ ಕಾಡಿನ ಅತಿಕ್ರಮಣ ನಡೆಯುತ್ತಿದೆ. ಪ್ರವಾಸೋದ್ಯಮ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಕಾಡಿನ ನಡುವೆ ರೆಸಾರ್ಟ್, ಹೋಂ ಸ್ಟೇಗಳು ರೂಪುಗೊಳ್ಳುತ್ತಿವೆ. ಹೀಗೆ, ಕಾಡಿನಲ್ಲಿ ಮನುಷ್ಯರ ಹೆಜ್ಜೆಗಳು ಹೆಚ್ಚಿದಂತೆಲ್ಲ ಪ್ರಾಣಿಗಳು ತಮ್ಮ ಖಾಸಗೀತನ ಕಳೆದುಕೊಳ್ಳತೊಡಗುತ್ತವೆ. ಕಾಡಿಗೂ ನಾಡಿಗೂ ಅಂತರ ಕಡಿಮೆಯಾಗಿ, ಆಹಾರ ಹುಡುಕಿಕೊಂಡು ಪ್ರಾಣಿಗಳು ಊರಿನತ್ತ ಮುಖಮಾಡುತ್ತವೆ. ಚಿರತೆ, ಕರಡಿ ಹಾಗೂ ಆನೆಗಳು ನಾಡಿನಲ್ಲಿ ಕಾಣಿಸಿಕೊಳ್ಳಲಿಕ್ಕೆ ಆಹಾರದ ಹುಡುಕಾಟವೇ ಪ್ರಮುಖ ಕಾರಣಗಳಲ್ಲೊಂದಾಗಿದೆ. ಈ ಭೂಮಿ ಮನುಷ್ಯನಿಗೆ ದೊರೆತ ಜಹಗೀರು ಎಂದು ಭಾವಿಸುವ ನಾವು ಪ್ರಾಣಿಗಳನ್ನು ಕೊಂದು ನಮ್ಮ ಫಸಲನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತೇವೆ.

‘ಆನೆಗಳ ಕಾರಿಡಾರ್’ಗಳು ಅಳಿಸಿಹೋಗುತ್ತಿರುವ ಆತಂಕ ಈಚಿನ ದಿನಗಳಲ್ಲಿ ಹೆಚ್ಚುತ್ತಿದೆ. ನೀರು–ಮೇವು ಹುಡುಕಿಕೊಂಡು ಆನೆಗಳ ಕುಟುಂಬ ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಸಂಚರಿಸುವ ದಾರಿಯೇ ‘ಆನೆಪಥ’. ಸಂತಾನ ಅಭಿವೃದ್ಧಿಗಾಗಿ ಕೂಡ ಪ್ರಾಣಿಗಳು ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಸಂಚರಿಸುತ್ತವೆ. ಆನೆ, ಹುಲಿ, ಚಿರತೆ, ಕರಡಿ, ಜಿಂಕೆ, ಕಾಡೆಮ್ಮೆಗಳಂಥ ಪ್ರಾಣಿಗಳು ಈ ದಾರಿಗಳನ್ನು ಬಳಸುತ್ತವೆ. ಅವುಗಳ ಸದೃಢ ತಳಿ ಮುಂದುವರೆಯಲು ಈ ಸಂಚಾರ ಅಗತ್ಯ. ನಾಗರಿಕ ಜಗತ್ತಿನ ವಿವಿಧ ಚಟುವಟಿಕೆಗಳ ಕಾರಣ ಕಾಡುಗಳನ್ನು ಸಂಪರ್ಕಿಸುವ ದಾರಿಗಳು ಅಳಿಸಿಹೋಗುತ್ತವೆ. ಇದು ದಾರಿಯೊಂದು ಅಳಿಸಿಹೋಗುವಷ್ಟು ಸರಳವಾದ ಪ್ರಕ್ರಿಯೆಯಲ್ಲ. ಪ್ರಾಣಿಗಳ ಸಂತಾನೋತ್ಪತ್ತಿ ಮೇಲೆ ಕೂಡ ಈ ಪಲ್ಲಟ ಪರಿಣಾಮ ಬೀರುತ್ತದೆ. ತಮಗೆ ರೂಢಿಯಾದ ದಾರಿ ಸಿಗದೆ ಹೋದಾಗ, ದಿಕ್ಕುತಪ್ಪುವ ಪ್ರಾಣಿಗಳು ಊರಿಗೆ ಪ್ರವೇಶಿಸುತ್ತವೆ. ಆಗ ಉಂಟಾಗುವ ಮಾನವ – ಪ್ರಾಣಿ ಸಂಘರ್ಷದಲ್ಲಿ ಪ್ರತಿವರ್ಷ 50 ಆನೆಗಳು ಹಾಗೂ 200 ಜನ ಜೀವ ಕಳೆದುಕೊಳ್ಳುತ್ತಿದ್ದಾರೆ ಎನ್ನುವ ಅಂದಾಜಿದೆ.

ಕಾಡು ಪ್ರಾಣಿಗಳು ಊರಿಗೆ ಬಂದ ಸಂದರ್ಭದಲ್ಲಿ ತಾಳ್ಮೆ ಹಾಗೂ ಸಹಾನುಭೂತಿಯಿಂದ ನಡೆದುಕೊಳ್ಳುವ ನೈತಿಕತೆ ಸಮಾಜದ್ದಾಗಿದೆ. ಇಂಥ ಸಂದರ್ಭಗಳನ್ನು ಎದುರಿಸುವುದು ಹೇಗೆ ಎನ್ನುವ ಬಗ್ಗೆ ಕಾಡಿನಂಚಿನ ಊರುಗಳ ಜನರಿಗೆ ಅರಣ್ಯ ಇಲಾಖೆ ಸೂಕ್ತ ತಿಳಿವಳಿಕೆ ನೀಡಬೇಕಿದೆ. ಅಷ್ಟು ಮಾತ್ರವಲ್ಲ, ಜನರ ದೂರುಗಳಿಗೆ ತಕ್ಷಣ ಸ್ಪಂದಿಸುವ ಕ್ರಿಯಾಶೀಲತೆಯನ್ನು ಇಲಾಖೆ ಪ್ರದರ್ಶಿಸಬೇಕಿದೆ.

■ **ರಘುನಾಥ ಚ.ಹ.**

ನಾಗರಿಕ ಜಗತ್ತಿನ ವಿವಿಧ ಚಟುವಟಿಕೆಗಳ ಕಾರಣ ಕಾಡುಗಳನ್ನು ಸಂಪರ್ಕಿಸುವ ದಾರಿಗಳು ಅಳಿಸಿಹೋಗುತ್ತವೆ. ಇದು ದಾರಿಯೊಂದು ಅಳಿಸಿಹೋಗುವಷ್ಟು ಸರಳವಾದ ಪ್ರಕ್ರಿಯೆಯಲ್ಲ. ಪ್ರಾಣಿಗಳ ಸಂತಾನೋತ್ಪತ್ತಿ ಮೇಲೆ ಕೂಡ ಈ ಪಲ್ಲಟ ಪರಿಣಾಮ ಬೀರುತ್ತದೆ. ತಮಗೆ ರೂಢಿಯಾದ ದಾರಿ ಸಿಗದೆ ಹೋದಾಗ, ದಿಕ್ಕುತಪ್ಪುವ ಪ್ರಾಣಿಗಳು ಊರಿಗೆ ಪ್ರವೇಶಿಸುತ್ತವೆ.

